**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**Spl.C(SC/ST).No.: 2/2020**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ 2

ಸಿ.ಡಬ್ಲ್ಯೂ ನಂಃ 2

ಸಾಕ್ಷಿಯನ್ನು ದಿನಾಂಕಃ 20-03-2023
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರಳ ಹೆಸರು | ಃ | ಹನುಮವ್ವ |
| ಗಂಡನ ಹೆಸರು | ಃ | ಸಂಗಪ್ಪ |
| ವಯಸ್ಸು | ಃ | 20 ವರ್ಷ |
| ಉದ್ಯೋಗ | ಃ | ಹೊಲಮನಿ ಕೆಲಸ |
| ವಾಸ ಸ್ಥಳ | ಃ | ತಿಗರಿ. |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ನಾನು ಹೊಲ ಮನಿ ಕೆಲಸ ಮಾಡುತ್ತೇನೆ. ನಮ್ಮ ಊರಿನಲ್ಲಿ ಪ್ರತಿವರ್ಷ ಫಕೀರೇಶ್ವರ ಜಾತ್ರೆ ನಡೆಯುತ್ತದೆ. ಅಲ್ಲಿ ಸಾಮೂಹಿಕ ಮದುವೆ ಮಾಡುತ್ತಾರೆ. ನನ್ನ ಮದುವೆ ಸಹಾ ಸಂಗಪ್ಪನ ಜೊತೆ ಸಾಮೂಹಿಕ ಮದುವೆಯಲ್ಲಿ ಆಯಿತು. ಆ ಸಾಮೂಹಿಕ ಮದುವೆ ದಿನ ನನ್ನ ತಂದೆ-ತಾಯಿಗಳು ನನ್ನ ಮತ್ತು ಸಂಗಪ್ಪನ ಹೆಸರು ಬರೆಸಿದ್ದರು, ಮದುವೆ ಮಾಡಿಕೊಟ್ಟರು. ಈಗ್ಗೆ 3 ವರ್ಷಗಳ ಹಿಂದೆ ಸಾಮೂಹಿಕ ಮದುವೆ ಮಾಡಿಸುತ್ತೇವೆಂದು ದುಡ್ಡನ್ನು ಕಟ್ಟಿಸಿಕೊಂಡಿದ್ದರು. ನಾವು ಕೀಳು ಜಾತಿಯವರು ಎಂದು ನಮ್ಮನ್ನು ಗುಡಿಯಿಂದ ಹೊರಗೆ ಹಾಕಿ ಅಲ್ಲಿ ಮದುವೆ ಮಾಡಿಕೊಳ್ಳುವಂತೆ ಹೇಳಿದರು. ಆಗ ಪಕ್ಕದ ಸಮುದಾಯ ಭವನದ ಪಕ್ಕ ನಮ್ಮವರು ಮದುವೆಯನ್ನು ಮಾಡಿದರು. ನಮ್ಮ ಮದುವೆಯ ನಂತರ ನಮ್ಮ ಗುರು-ಹಿರಿಯರು ಬಂದರು. ಅಲ್ಲಿ ನಮ್ಮ ಮಂದಿ ಮತ್ತು ಊರಿನ ಹಿರಿಯರ ನಡುವೆ ಜಗಳ ಆಯಿತು, ಊರಿನ ಹಿರಿಯರು ಅಂದರೆ ಆರೋಪಿತರ ನಡುವೆ ಜಗಳ ಆಯಿತು. ಮೂಹೂರ್ತ ಮಾಡಬೇಕೆಂದು ನಮ್ಮವರು ಕೇಳಿದ್ದು ಅದಕ್ಕೆ ಅವರು ಊಟಕ್ಕೆ ಕುಳಿತುಕೊಳ್ಳಲು ಮಾತ್ರ ಬನ್ನಿರಿ ಎಂದು ಹೇಳಿದರು. ನಿಮ್ಮ ಮದುವೆಯನ್ನು ಯಾಕೆ ಮಾಡೋಣಾ ಎಂದು ಅಂದರು. ಈ ಬಗ್ಗೆ ಪೊಲೀಸರು ಹೇಳಿಕೆ ಪಡೆದಿದ್ದಾರೆ.

( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ</u>

ದಿಃ 27-8-20019 ರಂದು ತಿಗರಿ ಗ್ರಾಮದಲ್ಲಿ ನಡೆದ ಫಕೀರೇಶ್ವರ ಜಾತ್ರೆ ಮಹೋತ್ಸವದಲ್ಲಿ ಸಾಮೂಹಿಕ ವಿವಾಹದಲ್ಲಿ 4 ಪರಿಶಿಷ್ಟ ಜಾತಿಯ ಜೋಡಿಗಳಿಗೆ ಪ್ರತ್ಯೇಕವಾಗಿ ವಿವಾಹ ಮಾಡಿಕೊಡಿ ಎಂದು ಹೇಳಿದ್ದು, ಆ ಬಗ್ಗೆ ಜಗಳ ನಡೆದಿದ್ದು, ಆ ಬಗ್ಗೆ ನಮಗೆ ಸವರ್ಣೀಯರ ಜೊತೆ ಅವಕಾಶ ಮಾಡಿಕೊಡದೇ ಮತ್ತು ನಿಮ್ಮ ಕಾಲೋನಿಯ ಅಂಬೇಡ್ಕರ ಭವನದಲ್ಲಿ ವಿವಾಹ ಮಾಡಿಕೊಳ್ಳಿ ಎಂದು ನಮಗೆ ಅವಮಾನ ಮಾಡಿ ಅಸ್ಪೃಶ್ಯತೆ ಆಚರಣೆ ಮಾಡಿದ್ದರು ಎಂದರೆ ಸರಿ. ಆರೋಪಿತರು ಅಸ್ಪೃಷ್ಯತೆ ಆಚರಣೆ ಮಾಡಿದ್ದರು ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿ ಗುರುತಿಸುತ್ತಾರೆ.

<u>ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದ</u>

ನಾನು ಹುಟ್ಟಿನಿಂದ ತಿಗರಿ ಗ್ರಾಮದಲ್ಲಿ ವಾಸವಿದ್ದೇನೆ. ಎಷ್ಟು ವರ್ಷಗಳಿಂದ ನಮ್ಮ ಊರಿನಲ್ಲಿ ಫಕೀರೇಶ್ವರ ಜಾತ್ರೆ ನಡೆಯುತ್ತಿದೆ ಎಂದು ಗೊತ್ತಿಲ್ಲ. ಆ ಜಾತೆಯಲ್ಲಿ ಪ್ರತಿವರ್ಷ ಸಾಮೂಹಿಕ ಮದುವೆಗಳನ್ನು ಮಾಡುವುದು ನನಗೆ ಗೊತ್ತು. ನಾವು ಆ ಮದುವೆಗಳಿಗೆ ಹೋಗುತ್ತಿದ್ದೆವು. ನಾವು ನಮ್ಮ ತಂದೆ-ತಾಯಿಗೆ 4 ಜನ ಮಕ್ಕಳು. ನಮ್ಮ ಓಣಿಯಲ್ಲಿ ಸಾರೆಮ್ಮ ಗುಡಿ ಇದೆ ಎಂದರೆ ಸರಿ. ನಮ್ಮ ಸಮಾಜದಲ್ಲಿ ನಮ್ಮ ಓಣಿಯಲ್ಲಿರುವ ಸಾರೆಮ್ಮ ಗುಡಿಯಲ್ಲಿ ಮದುವೆಗಳು ನಡೆಯುತ್ತವೆ ಎಂದರೆ ಸರಿ. ನನ್ನ ಮದುವೆ ಬಗ್ಗೆ ನಮ್ಮ ತಂದೆ-ತಾಯಿಯವರು ವಯಸ್ಸಿನ ದಾಖಲೆಯನ್ನು ಶಾಲೆಯಿಂದ ಪಡೆದುಕೊಂಡು ಹಾಜರುಪಡಿಸಿದ್ದಾರೋ ಇಲ್ಲವೋ ಗೊತ್ತಿಲ್ಲ ಹಾಗೂ ಇದು ಮೊದಲನೇ ಮದುವೆ ಎಂದು ದೃಢೀಕರಣವನ್ನು ಪಂಚಾಯತಿಗೆ ಕೊಟ್ಟಿದ್ದರೋ ಇಲ್ಲವೋ ಗೊತ್ತಿಲ್ಲ. ನಮ್ಮ ತಂದೆ-ತಾಯಿಯವರು ಫಕೀರೇಶ್ವರ ಜಾತ್ರೆಯಲ್ಲಿ ಮದುವೆಗೆ ಹಣ ಕಟ್ಟಿದ್ದಾರೆಂದು ಮಾಹಿತಿ ಇಲ್ಲ.

ಕೋರಿಕೆಯ ಮೇರೆಗೆ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು.

(ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಉಕ್ತ ಉಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು) ಓ ಹೇ ಕೇ ಸರಿ ಇದೆ

(ಶ್ರೀಮತಿ ಬಿ ಎಸ್ ರೇಖಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ